IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

# ಕನ್ನಡ ಸಾಹಿತ್ಯದ ಹಿನ್ನಲೆಯಲ್ಲಿ ಸ್ತ್ರೀಸಂವೇದನೆ ಮತ್ತು ಸ್ತ್ರೀವಾದ ಸಂಘರ್ಷ:

ಡಾ.ವೈ.ಚಂದ್ರಬಾಬು

ಸಜೀವ ಪ್ರಾಣಿ–ಪಕ್ಷಿಗಳಲ್ಲಿ, ಹಾಗೆಯೇ ಮಾನವನಲ್ಲಿ ಸಂತಾನೋತ್ಪತ್ತಿ ಮತ್ತು ಜೈವಿಕವಾದ ಕಾರಣಗಳಿಂದ ಗಂಡು ಮತ್ತು ಹೆಣ್ಣು ಎಂಬ ಲಿಂಗಭೇದ ಮಾಡಲು ಅವಕಾಶವಿದೆ. ಈ ಭೇದ ಸೃಷ್ಟಿಯ ಮೂಲಸ್ವರೂಪದ್ದಾಗಿದ್ದು, ಇರ್ವರಲ್ಲಿ ಪರಸ್ಪರ ಅವಲಂಬಿತ, ಅನ್ಯೋನ್ಯತೆಯನ್ನು ಉಂಟುಮಾಡುವ ನೈಸರ್ಗಿಕ ನೀತಿಯಾಗಿದೆ. ಈ ಅವಲಂಬಿತ ಪರಿಸರದಲ್ಲಿಯೇ ಪರಸ್ಪರರಲ್ಲಿ ನೋವು–ನಲಿವು, ಸುಖ–ದುಃಖಗಳನ್ನು ಬೆಸೆಯಲಾಗಿದೆ. ಸಂತಾನೋತ್ಪತ್ತಿಗೆ ಗಂಡು–ಹೆಣ್ಣಿನ ಸಹಜೀವನ ಅಗತ್ಯವಾದರೂ, ಹೆಣ್ಣು, ಗಂಡಿಗಿಂತಲೂ ಭಿನ್ನವಾದ ರೀತಿಯಲ್ಲಿ ಸಂತಾನವನ್ನು ಬೆಳೆಸುವ ಪ್ರಾಥಮಿಕ ಬಾಧ್ಯತೆಯನ್ನು ಜೈವಿಕವಾಗಿಯೇ ಪಡೆದಿದ್ದಾಳೆ. ಅದರಿಂದ ಅವಳು ಒಂದು ಕುಟುಂಬ ವ್ಯವಸ್ಥೆಗೆ ಕಾರಣವಾಗುತ್ತಾಳೆ. ಗಂಡು ಪರಕೀಯ. ಬೀಜರೂಪಿಯಾಗಿ ಕಾಣಿಸುವ ಅವನು, ಕುಟುಂಬದಲ್ಲಿ ಎರಡನೇ ವ್ಯಕ್ತಿಯಾಗುತ್ತಾನೆ. ಇದನ್ನು ಪ್ರಾಣಿ ಪಕ್ಷಿಗಳಲ್ಲಿಯೂ ಕಾಣಬಹುದು. ಆದರೂ ಗಂಡು ಮತ್ತು ಹೆಣ್ಣಿನ ಜೈವಿಕ ಆಕರ್ಷಣೆ, ಪರಸ್ಪರ ಅವಲಂಬನೆಯ, ಮಮತೆಯ ಆದರ್ಶತೆಯಿಂದ, ಈ ಜೋಡಿ ದೀರ್ಘಕಾಲದ ಸಹಜೀವನದ ಜೊತೆಗೆ, ಕುಟುಂಬದ ಪಾಲನೆ–ಪೋಷಣೆಯನ್ನು ಮಾಡುತ್ತ ಬಂದಿರುವುದನ್ನು ನೋಡಬಹುದು.

ಗಂಡು–ಹೆಣ್ಣಿನ ಪರಸ್ಪರ ಕೂಡು–ಸಂಬಂಧ ಮಾನವನಲ್ಲಿ ಆದರ್ಶದ ಅತಿರೇಕವಾಗಿ ವಿವಾಹ, ಸುಖ ಧಾಂಪತ್ಯ, ಸಂತಾನೋತ್ಪತ್ತಿಯ ಬೆಳವಣಿಗೆ, ಜೊತೆಗೆ ರಕ್ತಸಂಬಂಧದ ಪೋಷಣೆಗಳೆಂಬಂತೆ ತನ್ನ ವಂಶದ ಸರ್ವರನ್ನು ರಕ್ಷಿಸಿ, ಪಾಲನೆ ಮಾಡುವ ಜವಾಬ್ದಾರಿಗಳನ್ನು ರೂಪಿಸಿತು. ಈ ಪ್ರಕ್ರಿಯೆಯಲ್ಲಿ ಮಾನವ ತನ್ನ ಯಾಧೃಚ್ಛಿಕ ಶಕ್ತಿ ಸಾಮರ್ಥ್ಯಗಳು, ಸಾಮಾಜಿಕ ಅವಲಂಬನೆಯ ದೃಷ್ಟಿಯಿಂದ, ಭಾಷೆ, ಸಂಸ್ಕೃತಿ, ನಾಗರೀಕತೆಗಳನ್ನು ರೂಪಿಸಿಕೊಂಡನು. ಇಂತಹ ಬೆಳವಣಿಗೆ, ಗಂಡು ಮತ್ತು ಹೆಣ್ಣಿನ ಮಧ್ಯೆ ಶಕ್ತಿ, ಪರಾಕ್ರಮ, ಪರಸ್ಪರ ಅನಿವಾರ್ಯತೆ, ರಕ್ಷಣೆಗಳ ಚರ್ಚೆಯಲ್ಲಿ ಕಂಧಕವನ್ನು ನಿರ್ಮಾಣಮಾಡಿತು. ಪುರುಷ ಮತ್ತು ಮಹಿಳೆಯರಲ್ಲಿ, ಪರಸ್ಪರ ಮೇಲು–ಕೀಳುಗಳ ವಾಗ್ವಾದ ನಡೆದು, ಕುಟುಂಬದ ಪೋಷಕ ಮೂಲ ಕೇಂದ್ರವಾಗಿದ್ದ ಮಹಿಳೆ, ಎರಡನೆಯ ವ್ಯಕ್ತಿಯಾಗಿ, ಅಶಕ್ತ ಅಬಲೆಯಾದಳು. ಪುರುಷನ ಶಾರೀರಿಕ ಬಲದ ಕಾರಣ, ಅವನ ಅಧೀನತೆಯನ್ನು ಒಪ್ಪಿಕೊಳ್ಳಬೇಕಾಯಿತು. ಅದೇ ಸಂದರ್ಭದಲ್ಲಿ ಪುರುಷನ ಭೋಗದ ಕನಸುಗಳಿಗೆ ಮಹಿಳೆ ಸುಖದ ವಸ್ತುವೆಂಬ ಭ್ರಮೆ ಅಧಿಗೊಳ್ಳುತ್ತಾ ಬೆಳೆದಂತೆ, ಮಹಿಳಾ ಶೋಷಣೆ ಸಾಮಾನ್ಯವಾಯಿತು.

ಮಾನವ ಸಮಾಜದಲ್ಲಿ ವಿವಿಧ ಜನಾಂಗಗಳು ಮುಖಾಮುಖಿಯಾದಾಗ, ಸಂಘರ್ಷ–ಸಾಮರಸ್ಯಗಳು ನಡೆದವು. ಮೊದಮೊದಲು ಸಂಘರ್ಷದ–ಯುದ್ಧ ಮತ್ತಿತರ ಕಾರಣಗಳಿಗಾಗಿ ಗಂಡುಮಕ್ಕಳ ಮೇಲೆ ವ್ಯಾಮೋಹ ಹೆಚ್ಚುತ್ತಾ ಸಾಗಿತು. ಈ ಹಂತದಲ್ಲಿ ಮಹಿಳೆಯರನ್ನು ದಾಸಿಯರನ್ನಾಗಿಸಲು ತಯಾರಿ ನಡೆದಿದೆ. ಸುಮಾರು ಕಿ.ಪೂ.2000ದ ನಂತರ ಭೂಮಿಯ ಮೊದಲ ನಾಗರೀಕತೆಯ ಸುಭೀಕ್ಷೆ ಕಾಲ ಮುಗಿದು, ಎರಡನೆಯ ಹಂತದ ಆರಂಭದ ದಿನಗಳು ಪ್ರಾರಂಭವಾಗಿದೆ. ಈ ಸಂದರ್ಭದಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಮಸುಕಳಿಸಿ, ಪಿತೃಪ್ರಧಾನ ವ್ಯವಸ್ಥೆಯ ಗುಲಾಮಗಿರಿಗೆ ಮಹಿಳೆ ಬಲಿಯಾಗಿದ್ದಳು ಎಂಬುದನ್ನು ಗ್ರಹಿಸಬಹುದು. ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಾಮಾಜಿಕವಾಗಿ ಮಹಿಳೆಯ ಎಲ್ಲಾ ಅಧಿಕಾರಗಳನ್ನು ಕಬಳಿಸಲಾಗಿತ್ತು. ಮಹಿಳೆ ಶೋಷಣೆಯ ಕೂಸಾಗಿ ತಬ್ಬಲಿಯಾಗಿದ್ದಳು.

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

ವಿಚಾರಶೀಲ ಮಹಿಳೆಯ ಪ್ರತಿರೋಧಗಳಿಗೆ ವಿರುದ್ಧ ತಂತ್ರವನ್ನು ಹೆಣೆಯಲು ಪ್ರಯತ್ನಿಸಿದ ಪುರುಷ, ಸಾಮಾಜಿಕ ಸುವ್ಯವಸ್ಥೆಯ ನೆಪವನ್ನು, ವಂಶ ರಕ್ಷಣೆಯ ಜವಾಬ್ದಾರಿಯನ್ನು ಮುಂದು ಮಾಡಿಕೊಂಡು, ಮಹಿಳೆಯ ಶಾರೀರಿಕ ಅಶಕ್ತತೆಯ ಮೇಲೆ ದಾಳಿ ನಡೆಸುವುದಲ್ಲದೆ, ಅವಳ ನೈಸರ್ಗಿಕ ಮಾಸಿಕ ಸಂತಾನ ಫಲಿತದ ರಕ್ತಸ್ರಾವವನ್ನೇ ಮೈಲಿಗೆ, ಕಂಟಕವೆಂದು ಜರಿದು, ಅದರ ಪರಿಹಾರ ರೂಪದ ಆಚರಣೆಗಳ ಸೂತ್ರಗಳನ್ನು ನಿಯಮಗಳಾಗಿ ರೂಪಿಸಿ. ಅದರ ಕಾರ್ಯರೂಪದ ಜವಾಬ್ದಾರಿಯನ್ನು ಅವಳಿಗೇ ವಹಿಸಿದನು. ಮಹಿಳಾ ಮೈಲಿಗೆಯ ಅಶುಭದ ಕಾರಣ ದೇವರ ಸಿಟ್ಟಿಗೆ ಬಲಿಯಾಗಬೇಕಾಗುತ್ತದೆ. ಧರ್ಮದ ವಿನಾಶವಾಗುತ್ತದೆಂಬ ಭಯವನ್ನು ಹೇರಿ, ಅವಳ ಮತ್ತು ತನ್ನ ಮಧ್ಯೆ ಭೇದವನ್ನು ನಿರ್ಮಿಸಿ, ಅವಳನ್ನು ಮಾನಸಿಕವಾಗಿ ದುರ್ಬಲಗೊಳಿಸಿ, ಪುರುಷ ಆದಿಪತ್ಯವನ್ನು ಸಾಧಿಸಿರುವುದು ಚರಿತ್ರೆಯ ಗತಸತ್ಯ.

ವೈಚಾರಿಕ ಶಿಕ್ಷಣವನ್ನು ಕಲಿಯುವ ಮಹಿಳೆಯ ಜ್ಞಾನದಾಹಕ್ಕೆ ಶಾಶ್ವತ ಬೀಗ ಮುದ್ರೆಯನ್ನು ಜಡಿದು, ಕುಟುಂಬ ನಿರ್ವಹಣೆ, ಮಕ್ಕಳ ಪಾಲನೆ ಪೋಷಣೆ, ಕೃಷಿ, ಗೃಹಕೃತ್ಯಗಳಲ್ಲಿ ನಿರಂತರ ದುಡಿಸಿದನು. ಆದರೂ, ಅವಳ ಕೆಲಸಕ್ಕೆ ಮಾನ್ಯತೆಯಿಲ್ಲ. ಆರ್ಥಿಕಮೌಲ್ಯವಿಲ್ಲ. ಹೊರಗೆ ದುಡಿದರೂ ಪುರುಷನಿಗೆ ಸರಿಸಮವಾದ ಸಂಭಾವನೆ ಆಕೆಗೆ ದೊರಕುವುದಿಲ್ಲ. ಇಂದಿನ ಮುನಿಸಿಪಾಲಿಟಿ ಕೆಲಸ ಎಂದು ನಾವು ಭಾವಿಸಲಾದ ಸ್ವಚ್ಛತೆಯನ್ನು ನಿರ್ವಹಿಸುವ ಸಂಪೂರ್ಣ ಕೆಲಸಗಳೆಲ್ಲಾ ಆಕೆಗೆ ಮೀಸಲು, ಹೊಲಸು ತೊಳೆಯುವುದು, ಮುಸುರೆ ತಿಕ್ಕುವುದು, ಸಗಣಿ ಎತ್ತುವುದು, ಕಳೆ ಹೊರೆಯುವುದು ಎಲ್ಲವೂ ಅವಳದೇ ಭಾಗ. ಪ್ರಾರಂಭದ ಸ್ತ್ರೀವಾದ ಮತ್ತು ಸ್ತ್ರೀಸಂವೇದನೆಯಲ್ಲಿ ಮಹಿಳೆಯ ಇಂತಹ ಗತಚರಿತ್ರೆಯನ್ನು ಗ್ರಹಿಸುವ ಮೂಲ ಆಶಯವಿದೆ.

ಆ ನಿಟ್ಟಿನಲ್ಲಿ ಮುಂದುವರೆದು ಯೋಚಿಸಿದಾಗ, ಪುರುಷಪ್ರಧಾನ ವ್ಯವಸ್ಥೆ ರೂಪಿಸಿದ ಭಾರತದ ಮಹಿಳೆಯ ಸ್ವರೂಪವೇನು? ಯಾರನ್ನು ಭಾರತದ ಮಹಿಳೆ ಎಂದು ಕರೆಯಲಾಗುತ್ತಿತ್ತು. ಅವರು ಬಾಳಿದ ರೀತಿ ಯಾವುದು. ಕನ್ನಡ ಸಾಹಿತ್ಯದಲ್ಲಿ ಆ ಕುರಿತ ದಾಖಲೆಗಳೇನಾದರೂ ಇವೆಯೇ? ಎಂದು ಹುಡುಕಿದಾಗ ರಾಮಾಯಣ, ಮಹಾಭಾರತ ಕಾವ್ಯಗಳ ಮೂಲಕ ಆದರ್ಶ ಮಹಿಳೆಯರ ಪರಂಪರೆಯೇ ಮುಂದೆ ನಿಲ್ಲುತ್ತದೆ. ಸತಿ ಸಾವಿತ್ರಿ ತನ್ನ ಪತಿವ್ರತಾ ಧರ್ಮದ ಕಾರಣ ಸತ್ತ ಸತ್ಯವಾನನನ್ನು ಯಮಧರ್ಮರಾಜನಿಂದ ಚಾಣಾಕ್ಷವಾಗಿ ಬಿಡಿಸಿದ ಕಥೆ, ಪತಿಯೇ ಪರದೈವವೆಂದು ಬದುಕಿ ಬಾಳಿದ ಸತಿ ನರ್ಮದಾಳ ಕಥೆ. ಮತ್ತೊಂದು ಸತಿ ಅನಸೂಯ, ತನ್ನ ಪತಿವ್ರತಾ ಧರ್ಮದ ಕಾರಣ ತ್ರಿಮೂರ್ತಿಗಳನ್ನು ಮಕ್ಕಳಾಗಿಸಿದ ರೋಚಕ ಕಥೆ. ಸೀತೆ ವನವಾಸಕ್ಕೆ ಹೋಗಿ ಗಂಡನನ್ನೇ ಅನುಸರಿಸಿ ಕಷ್ಟದಲ್ಲಿಯೂ ಸುಖ ಕಂಡವಳೂ, ದುಷ್ಟ ರಾವಣನನ್ನು ಕೊಲ್ಲಿಸಿದವಳು, ಹಾಗೆಯೇ, ತಾರಾ, ಅಹಲ್ಯೆ, ಕುಂತಿ, ದ್ರೌಪದಿ, ಚಂದ್ರಮತಿ ರುಕ್ಮಿಣಿಯರೂ ಗಂಡಂದಿರ ಸುಖಕ್ಕಾಗಿ ತ್ಯಾಗ ಮಾಡಿದವರು. ಧರ್ಮಸಾಮ್ರಾಜ್ಯವನ್ನು ಕಟ್ಟಲು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಹಕರಿಸಿದವರು. ಇದೇ ಕಾರಣಕ್ಕೆ ಈ ಮಹಿಳೆಯರು ಆದರ್ಶಪ್ರಾಯರು. ಭಾರತೀಯ ಮಹಿಳಾ ಸಂಸ್ಕೃತಿಯ ನಿರ್ಮಾಪಕರು ಅವರು. ಬಾಲ್ಯವಿವಾಹ, ವಿದುವಾ ಪದ್ಧತಿ, ಅರ್ಥಾತ್ ಜೋಹರ ಪದ್ಧತಿ, ಸತೀಸಹಗಮನ, ಪತೀವ್ರತಾ ಧರ್ಮ ಪರಿಪಾಲನಾ, ಬಹುಪತ್ನಿಪದ್ಧತಿ ಪರ ಒಲವು, ವೇಶ್ಯಾವಾಟಿಕೆಗೆ ವಿರೋಧ ವ್ಯಕ್ತಪಡಿಸದ ಧೋರಣೆ, ಮಹಾಸತಿ ಮೊದಲಾದ ಆದರ್ಶಮಹಿಳೆಯ ಸದ್ಗುಣ ಚಿತ್ರಗಳು ಈ ಸಾಲಿನಲ್ಲಿ ಸ್ವಾರಸ್ಯಕರ.

ಇನ್ನೂ ಮನುಕುಲಕ್ಕೆಲ್ಲಾ ಜ್ಞಾನವನ್ನು ಕೊಡುವ ವಿದ್ಯಾದೇವತೆ ಮಹಿಳೆ ಶಾರದೆ, ಧನ-ಕನಕಗಳನ್ನು ಕೊಟ್ಟು ಪಾಲಿಸುವ ದೇವತೆ ಮಹಿಳೆ ಲಕ್ಷ್ಮಿ, ದುಷ್ಟರನ್ನು ನಾಶಮಾಡಿ ಸಜ್ಜನರಿಗೆ ರಕ್ಷಣೆ ಕೊಡುವ ದೇವರು ಮಹಿಳೆ ಆದಿ ಪರಾಶಕ್ತಿ ಅರ್ಥಾತ್ ಪಾರ್ವತಿ, ಅವಳ ಪರಿವಾರ ಲೋಕರಕ್ಷಕ ದೇವತೆಗಳು ನವದುರ್ಗೆಯರು ಮಹಿಳೆಯರೇ. ಅದರಿಂದ ಈ ದೈವಿಕ ಮಹಿಳೆ ಮತ್ತು ಕಾವ್ಯಗಳ ಮಹಿಳೆಯರಿಗೆ ಉನ್ನತ ಸ್ಥಾನ, ಆದರ್ಶತನಗಳ ಮಮಕಾರವನ್ನು ನೀಡುತ್ತೇವೆ. ಆದರೆ

ಬದುಕಿರುವ ಮನುಕುಲದಲ್ಲಿ ಸ್ತ್ರೀಗೆ ರಕ್ಷಣೆ ಇಲ್ಲದ ವ್ಯಂಗ್ಯತನ ನಮ್ಮ ಭಾರತೀಯ ಮಹಿಳಾಕಥಾನಕ ಚರಿತ್ರೆಯಲ್ಲಿದೆ. ಜನಪದ ಸ್ತ್ರೀಪ್ರಧಾನ ಕಥಾನಕಗಳಾದ, ನೆರಳ ಬಿದ್ದಗಸಿ ತೆರದಾವ, ಹೊಳೆಗಂಗಮ್ಮಗ ಗೆದೆಯೋದು, ಕಾಶಮ್ಮಳಹಾಡು, ನೀಲಗಂಗಾನ ಹಾಡು, ಕೆರೆಗೆಹಾರ, ಸಂಗಮ್ಮಳ ಹಾಡು, ನಮ್ಮ ರೂಪಕ ಬೆಂಕಿ ಹಚ್ಚಲಿ, ಕಾಳಿಂಗರಾಯನಹಾಡು ಮೊದಲಾದ ಹೆಣ್ಣು ಮಕ್ಕಳ ಚರಿತ್ರೆಯಲ್ಲಿ ಪತಿವ್ರತಾಧರ್ಮ ಮತ್ತು ಪುರುಷಮೌಲ್ಯಗಳಿಗೆ ಹೆಣ್ಣಿನ ನಿಷ್ಠೆಯನ್ನು ವೈಭವೀಕರಿಸಿ ಪ್ರಚಾರಗೊಳಿಸಲಾಗಿದೆ. ಹೆಣ್ಣು ಮಕ್ಕಳ ಅಸಹಾಯಕತನ ವ್ಯವಸ್ಥೆಯ ಎದುರು ಮಂಕಾಗಿದೆ. ಇವು ಭಾರತೀಯ ಮಹಿಳಾ ಸ್ವರೂಪ. ಇದನ್ನು ಗುರುತಿಸುವ ಪ್ರಾಥಮಿಕ ವಿಷಯಗಳು ಸ್ತ್ರೀವಾದ ಮತ್ತು ಸ್ತ್ರೀಸಂವೇದನೆಯಲ್ಲಿದೆ.

ಮಹಿಳಾ ಸಂವೇದನೆಯನ್ನು ಐತಿಹಾಸಿಕವಾಗಿ ಗುರುತಿಸುವುದಾದರೆ, ಭಾರತೀಯ ಸಾಹಿತ್ಯಕ್ಕೆ ಸು.ಕ್ರಿ.ಶ. 3000 ವರ್ಷಗಳಿಗೂ ಅಧಿಕವಾದ ಇತಿಹಾಸವಿದೆ. ಇದರಲ್ಲಿ ಮಹಿಳೆಯರು ಧ್ವನಿ ಎತ್ತಿ ಮಾತನಾಡಿರುವ ದಾಖಲೆ, ಒಂದೇ ಒಂದು ಸಾಲು ನಮಗೆ ಸಿಗುವುದು ಮಹಾಭಾರತದಲ್ಲಿನ ದ್ರೌಪದಿ ಪಾತ್ರದಿಂದ. ತನ್ನ ಮಾನವನ್ನು ಸಭೆಯಲ್ಲಿ ಕಳೆದುಕೊಳ್ಳುವ ಸಂದರ್ಭದಲ್ಲಿ ಪುರುಷನನ್ನು ಪ್ರಶ್ನಿಸುತ್ತಾಳೆ. ಅದು ನ್ಯಾಯಕ್ಕಾಗಿ ರೋಧನ. ಪುರುಷರೇ ಇರುವ ಘೊಂಢಾರಣ್ಯದಲ್ಲಿ ಅವಳ ಮಾತುಗಳು ಯಾರಿಗೂ ಕೇಳಿಸುವುದಿಲ್ಲ. ಅನಂತರ ಸ್ಪಷ್ಟ ಉಲ್ಲೇಖಗಳು ಬಹುಶಃ ಕಡಿಮೆ. ಹತ್ತನೇ ಶತಮಾನದ ಅತ್ತಿಮಬ್ಬೆ ಸ್ವತಃ ಬರಹಗಾರ್ತಿಯಲ್ಲದಿದ್ದರೂ, ಧರ್ಮ ಮತ್ತು ಸಾಹಿತ್ಯಾಸಕ್ತಿಯಿಂದ ಜೈನ ಧಾರ್ಮಿಕ ಕೃತಿ ಶಾಂತಿನಾಥ ಪುರಾಣವನ್ನು ಪ್ರಚಾರಗೊಳಿಸಿದ್ದು, ರನ್ನ ಕವಿಗೆ ಪ್ರೋತ್ಸಾಹ ನೀಡಿದ್ದು, ಒಂದು ಆದರ್ಶತನ. ಸತಿಸಹಗಮನವಾಗದೇ ಉಳಿದ ಏಕೈಕ ಶ್ರೀಮಂತ ವಿಧುವೆ ಈಕೆಯಾಗಿದ್ದಳು.

ಮುಂದೆ ಹನ್ನೆರಡನೆಯ ಶತಮಾನದಲ್ಲಿ, ಅದೂ ಕನ್ನಡ ನೆಲದಲ್ಲಿ ಸ್ತ್ರೀ ಕೂಗು ಕೇಳಿಸುತ್ತದೆ. ಅಕ್ಕಮಹಾದೇವಿ ಪುರುಷನ ವಿರುದ್ಧ ಸೆಟೆದು ನಿಲ್ಲುತ್ತಾಳೆ. ಕಲ್ಯಾಣದಲ್ಲಿ ಬಸವಾದಿ ಶರಣರ ಆದರ್ಶತೆಯಿಂದ ಮಹಿಳಾ ಸಮಾನತೆ, ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಡಲಾಗುತ್ತದೆ. ಸಂಸಾರದ ನೆಲೆಯಲ್ಲಿಯೇ ಮುಕ್ತಿ ಪಡೆಯುವ ವೈಚಾರಿಕ ಹಂಬಲ, ಸತಿಪತಿಗಳೊಂದಾದ ಭಕ್ತಿ ಶಿವನಿಗೆ ಪ್ರಿಯವೆಂಬ ಸಂದೇಶ, ಮುಖ್ಯವಾಗಿ ಶೂದ್ರರಾದ ದಲಿತ ಮತ್ತು ಹಿಂದುಳಿದ ವ್ಯಕ್ತಿಗಳನ್ನು ಬಲಪಡಿಸುವ ಬಸವಣ್ಣನ ಆಶಯ ಮತ್ತು ಜಾತಿವ್ಯವಸ್ಥೆಯನ್ನು ಬೇರುಸಹಿತ ನಿರ್ಮೂಲನೆ ಮಾಡುವ ಕಂಕಣಬದ್ಧ ನಿರ್ಧಾರದ ಗುರಿ, ಜೊತೆಗೆ ಅರಿವಿಗೆ ಲಿಂಗಭೇದವಿಲ್ಲವೆಂಬ ಕಾರಣದಿಂದ ಶರಣರಲ್ಲಿ ಮಹಿಳೆಯೂ ಮಾನ್ಯವಾಗುತ್ತಾಳೆ. ಅಕ್ಷರವನ್ನೂ ಕಲಿಯುತ್ತಾಳೆ.

ವಚನಕಾರ್ತಿಯರ ವಚನಗಳನ್ನು ಪರಿಶೀಲಿಸಿದಾಗ ಅವರ ಸಾಮೂಹಿಕ ಜಾಗೃತಿಯ ಹಿಂದೆ ಒಂದು ಸಾಂಸ್ಕೃತಿಕ ಹೋರಾಟದ ಮಹಾ ಉದ್ದೇಶವಿರುವುದು ಮನವರಿಕೆಯಾಗುತ್ತದೆ. ಈ ಸಂದರ್ಭದಲ್ಲಿ ಪ್ರಶ್ನೆಗಳು ಅವಳಲ್ಲಿ ಉಂಟಾಗಿದೆ. ಹೆಣ್ಣು–ಗಂಡು ಎಂಬ ಭೇದ, ಜಾತಿ–ಕುಲಗಳ ತಾರತಮ್ಯ, ಮೇಲು–ಕೀಳು ಬಗ್ಗೆ ಅರಿವು ಅವಳನ್ನು ಪ್ರಶ್ನಿಸಿದೆ. ಅಂದಿನ ರಾಣಿಯರಿಂದ ಕಸಗುಡಿಸುವವಳವರೆಗೆ, ಹಾರುವರಿಂದ ಹಿಡಿದು ಅಂತ್ಯಜರವರೆಗೆ, ಪಂಡಿತರಿಂದ ಹಿಡಿದು ಅಜ್ಞಾನಿಗಳವರೆಗೆ, ವೇಶ್ಯೆರಿಂದ ಹಿಡಿದು ಸನ್ಯಾಸಿ–ಸಂಸಾರಿಗಳವರೆಗೆ ಎಲ್ಲರೂ ತಮ್ಮರಿವು ಪಡೆದುಕೊಂಡು ಮಾನವೀಯ ಮೌಲ್ಯಗಳನ್ನು ಸಾಧಿಸಲು ಉತ್ಸುಕರಾದರು. ಸಂಪ್ರದಾಯದ ಕಟ್ಟುಪಾಡುಗಳಿಂದ ಮುಕ್ತರಾಗಿ ನಿರ್ಭೀತರಾಗಿ ತಮ್ಮ ಆಲೋಚನೆಗಳನ್ನು ಸಾರಿದರು. "ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ಒಡವೆ ಎಂದು ಅರಿಯಬೇಕು ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದೆಂದರಿಯಬೇಕು ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿಕನಾಥನ ಪರಿಪೂರ್ಣನೆಂಬೆ" ಎನ್ನುವ ಗೊಗ್ಗವ್ವೆ ಎಂಬ ವಚನಕಾರ್ತಿ ಇಡಿಯ ಪುರುಷ ಪ್ರಧಾನ ವ್ಯವಸ್ಥೆಯು

ದಿಗ್ಭ್ರಮೆಯಾಗುವಂಥ ಒಂದು ಮೂಲಭೂತ ಪ್ರಶ್ನೆಯನ್ನು ಎತ್ತಿಬಿಡುತ್ತಾಳೆ. ಇದಕ್ಕೆ ಉತ್ತರವನ್ನೂ ತಿಳಿಯಬಯಸುತ್ತಾಳೆ. ಇದಕ್ಕೆ ವ್ಯವಸ್ಥೆ ಉತ್ತರ ಕೊಡಬೇಕಾಗಿದೆ.

ಶಿವಶರಣರು ಮಹಿಳೆಯರಲ್ಲಿ ಇಂತಹ ವೈಚಾರಿಕತೆಯನ್ನು ನಿರ್ಮಿಸುತ್ತಾರೆ. ಅವರಲ್ಲಿ ಅಕ್ಕಮಹಾದೇವಿಯಂತಹ ಭಕ್ತಿ, ವೈರಾಗ್ಯ, ಧೈರ್ಯ ಮತ್ತು ಆಧ್ಯಾತ್ಮಿಕ ಸಾಧಕಿಯನ್ನು ಸೃಷ್ಟಿಸಿದಲ್ಲದೆ, ಅನೇಕ ಹಿಂದುಳಿದ, ದಲಿತ ಮಹಿಳೆಯರಲ್ಲಿ ಸ್ತ್ರೀ ಪ್ರಜ್ಞೆಯನ್ನು ಬೆಳೆಸಿದರು. ಅಕ್ಕಮ್ಮಳ ಸಾಮಾಜಿಕ ಅರಿವು, ಅಮುಗೆರಾಯಮ್ಮಳ ಛಲ, ಆಯ್ದಕ್ಕಿ ಲಕ್ಕಮ್ಮಳ ಕಾಯಕ–ದಾಸೋಹ ನಿಷ್ಠೆ, ನೀಲಾಂಬಿಕೆಯ ನಿಷ್ಕಲ್ಮಷ ಪ್ರೇಮ, ಅಕ್ಕ ನಾಗಮ್ಮಳ ಮಾತೃ ಹೃದಯ, ಸತ್ಯಕ್ಕಳ ಏಕದೇವೂಪಾಸನೆ, ಮುಕ್ತಾಯಕ್ಕಳ ಮಹಾಜ್ಞಾನ, ಹಡಪದ ಲಿಂಗಮ್ಮಳ ಅಂತರಂಗ ನೆಮ್ಮದಿ, ಮೋಳಿಗೆ ಮಹಾದೇವಿಯ ತಾತ್ವಿಕ ನಿಲುವು, ಸೂಳೆಸಂಕವ್ವೆ, ಕಾಳವ್ವೆ, ರೇಮವ್ವೆ, ರೇಕವ್ವೆ, ರೇವಮ್ಮ, ನೀಲವ್ವೆ, ಮತ್ತು ಗೊಗ್ಗವ್ವೆಯರ ವಿಚಾರಶೀಲತೆ, ಈ ಮೊದಲಾದ ವ್ಯಕ್ತಿತ್ವ ಚಿತ್ರಗಳು ಒಂದು ಕಡೆಯಾದರೆ, ಅವರಲ್ಲಿನ ಕೆಳವರ್ಗದ ಹೆಣ್ಣು ಮಕ್ಕಳು ಬಾಯಿ ಬೀಗ ತೆರೆದದ್ದು ಮಹತ್ವದ ಬೆಳವಣಿಗೆಯಾಗಿದೆ. ಹೊಲಯ ಉರಿಲಿಂಗಪೆದ್ದಿಗಳ ಪುಣ್ಯಶ್ರೀ ಕಾಳಮ್ಮ ಗಂಡನ ಪ್ರಭಾವದಿಂದ ಸಂಸ್ಕೃತವನ್ನೂ ಅರ್ಥಮಾಡಿಕೊಂಡಿದ್ದಾಳೆ.

ಅಕ್ಕಮಹಾದೇವಿ ಲೌಕಿಕ ಗಂಡನಾದ ಜೈನ ಧರ್ಮದ ಕೌಶಿಕನನ್ನು ಗಂಡನೆಂದು ಒಪ್ಪಿ, ಆತನೊಂದಿಗೆ ದೈವತ್ವವನ್ನು ಕಾಣಲಾಗದೆ ಆ ದೈವತ್ವವನ್ನು ಅಲೌಕಿಕ ಗಂಡನಾದ, ತನ್ನ ಕನಸಿನ ಗಂಡನಾದ ಚೆನ್ನಮಲ್ಲಿಕಾರ್ಜುನನಲ್ಲಿ ಕಾಣಲು ಹವಣಿಸುತ್ತಾಳೆ. ಲೌಕಿಕ ಗಂಡನನ್ನು ನಿರಾಕರಿಸುತ್ತಾ ಚೆನ್ನ ಮಲ್ಲಿಕಾರ್ಜುನನಲ್ಲಿ ಪ್ರೀತಿ ಬೇಡುತ್ತಾಳೆ. " ಅಯ್ಯ ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು, ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ, ಅಯ್ಯ ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ. ಎಂದು ಗೋಗರೆಯ್ಯುತ್ತಾಳೆ. ಅಕ್ಕನಿಗೆ ಜೈನಧರ್ಮದ ಗಂಡ ಬೇಡ, ಅವಳು ಧರ್ಮ ಸಂಘರ್ಷಕ್ಕೆ ಒಳಗಾಗಿದ್ದಾಳೆ. ವೀರಶೈವನೇ ಗಂಡನಾಗಿದ್ದಾಗ ಅಕ್ಕನಲ್ಲಿ ಈ ಬಗೆಯ ಲೌಕಿಕತನದ ನಿರಾಕರಣೆ ಸಾಧ್ಯವಾಗುತ್ತಿಲ್ಲ. ಒತ್ತಾಯ ಮದುವೆ ಆಕೆಯಲ್ಲಿ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವಂತೆ ಮಾಡಿತು. ಅದರಿಂದ ಅಕ್ಕನದು ಏಕಮುಖವಾದ ಸಾಧನೆ ವಾಸ್ತವ ಬದುಕಿನಿಂದ ಫಲಾಯನವಾದ ಎಂಬ ಮಾತುಗಳನ್ನು ಸ್ತ್ರೀವಾದಿಗಳೆ ಚರ್ಚಿಸಿದ್ದಾರೆ. ಆದರೆ ಈ ಮಾತುಗಳನ್ನು ಒಪ್ಪಲಾಗದು. ಅಕ್ಕ ಕೌಶಿಕನಿಗೆ ಮೂರು ಷರತ್ತುಗಳನ್ನು ವಿಧಿಸಿದ್ದು, ನಿಜವಾದರೂ, ಹೆಣ್ಣನ್ನು ಒಂದು ಭೋಗವಸ್ತುವಾಗಿ ನೋಡುವ ಪುರುಷತನದ ಸ್ವಭಾವವನ್ನು ಅಕ್ಕ ಖಂಡಿಸುತ್ತಾಳೆ. ಹೆಣ್ಣಿಗೂ ಒಂದು ಮನಸ್ಸಿದೆ, ವ್ಯಕ್ತಿತ್ವವಿದೆ ಎಂಬುದನ್ನು ಮರೆತು ಹೆಣ್ಣಿನ ಅಂದ, ರೂಪಗಳಿಗಾಗಿ ಅವಳ ಮೇಲಿನ ದೌರ್ಜನ್ಯ, ಬಲವಂತಗಳು ಮಾನವೀಯತೆಗೆ ಅಪವಾದ. ಅಕ್ಕ ಆ ರೀತಿಯ ಲೌಕಿಕ ಭೋಗಸುಖವನ್ನು ಬಯಸುವ ಗಂಡನನ್ನು ತಿರಸ್ಕರಿಸುತ್ತಾಳೆ. ಹೆಣ್ಣಿನ ಹೆಣ್ತನವನ್ನು ಅರ್ಥಮಡಿಕೊಳ್ಳುವ, ಅವಳ ಕನಸಿನ ಗಂಡನ ಸ್ವರೂಪ, ಕೌಶಿಕನಲ್ಲಿ ಕಾಣದಿದ್ದಾಗ, ಅವನ ಶಾರೀರಿಕ ಭೋಗ ಸುಖದ ಸ್ತ್ರೀದೇಹವೇ ಅವಳಿಗೆ ತುಚ್ಛವಾಗಿ ಕಾಣುತ್ತದೆ. ಪುರುಷ ಮನೋಧರ್ಮದ ಖಂಡನೆಗಾಗಿ, ಪ್ರತಿಭಟನೆಯ ಸಂಕೇತವಾಗಿ ಅಕ್ಕನ ಅರೆಬೆತ್ತಲೆಯ ರೂಪ ಅವಳಿಗೆ ಅನಿವಾರ್ಯವಾಗುತ್ತದೆ. ಕಲ್ಯಾಣಕ್ಕೆ ಬಂದಾಗಲೂ ಕಿನ್ನರಿ ಬೊಮ್ಮಯ್ಯನ ಪರೀಕ್ಷೆ, ಅಲ್ಲಮನಿಂದ ಪ್ರಶ್ನಾವಳಿಯ ಸುರಿಮಳೆ, ರೋಸಿಹೋದ ಅಕ್ಕ, " ಕಾಡದಿರಣ್ಣಾ ಚನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳ" ಒಂದು ಮೊರೆಯಿಡುವ ಆರ್ತ ಸ್ಥಿತಿಗೆ ತಲುಪುತ್ತಾಳೆ. 'ನಿಮ್ಮ ಮಂಡೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು' ಎನ್ನುವ ಭರವಸೆಯನ್ನು ಶರಣ ಸಮೂಹಕ್ಕೆ ನೀಡುತ್ತಾಳೆ.

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

ಆದರೆ ತಳವರ್ಗದ ಮಹಿಳೆಯರಂತೆ ಕೌಟುಂಬಿಕ ಜೀವನದಲ್ಲಿ ಈಜುವ, ಆ ಮೂಲಕ ನೇರವಾಗಿ ಸ್ತ್ರೀಪರವಾದದ ಸಂಘರ್ಷ ಅಕ್ಕನಲ್ಲಿ ಕಾಣದಿದ್ದರೂ, ಸ್ತ್ರೀಕನಸಿನ ನಲ್ಲನಿಗಾಗಿ ಅವಳು ಹೋರಾಟವನ್ನು ಆರಂಭಿಸುತ್ತಾಳೆ. ಅದು ಆಧ್ಯಾತ್ಮದ ರೂಪದಲ್ಲಿ ವೈಯಕ್ತಿಕ ಸಾಧನೆಯ ರೂಪದಲ್ಲಿ ಕಾಣುತ್ತದೆ. ಕುಟುಂಬ ಪರಿಸರದಲ್ಲಿ ಅಕ್ಕ ನಗಣ್ಯ ಎನ್ನುವ ಮಹಿಳಾವಾದವನ್ನು ಒಪ್ಪಿದರೂ ಅಕ್ಕನ ಬಗೆಗೆ ಈ ಚರ್ಚೆ ಹುರುಳಿಲ್ಲವೆಂದು ನನ್ನ ಭಾವನೆ. ಸ್ತ್ರೀವಾದವೆಂದರೆ ಮಹಿಳೆ ತನ್ನ ಸ್ವಾತಂತ್ರ್ಯವನ್ನು ಕೋರುವುದು, ಪುರುಷನ ಅವಗುಣಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ವಿರೋಧಿಸುವ ಮನೋಧರ್ಮ ಮುಖ್ಯವಾಗುತ್ತದೆ. "ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣ"ವೆಂದು 'ವಚನಧರ್ಮಸಾರ'ದಲ್ಲಿ(ಮೈಸೂರು–1968,ಪುಟ 103) ಎಂ.ಆರ್.ಶ್ರೀನಿವಾಸಮೂರ್ತಿಯವರು ಹೇಳಿರುವ ಮಾತುಗಳಲ್ಲಿ ಸ್ತ್ರೀವಾದದ ಸ್ವರೂಪಗಳು ದಟ್ಟವಾಗಿವೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆ ಬಗ್ಗೆ ಮಹತ್ವದ ಮತ್ತೊಂದು ದಾಖಲೆ ಹದಿನೇಳನೆಯ ಶತಮಾನದ ಸಂಚಿಹೊನ್ನಮ್ಮನ ಹದಿಬದೆಯ ಧರ್ಮ ಕೃತಿಯ ಸಾರ. ಮಹಿಳೆ ಮತ್ತು ಪುರುಷರ ಅನ್ಯೋನ್ಯತೆಯ ಸ್ವರೂಪವನ್ನು ನಿರೂಪಿಸುವ ಕೃತಿಇದು. ಪುರುಷ ಮೌಲ್ಯಗಳ ಪರಮ ಸಾರವಾಗಿ, ಪುರುಷನೇ ಅವನ ಪರವಾಗಿ ಹೇಳುತ್ತಿರುವಂತೆ ಸತಿಧರ್ಮದ ವಿಶೇಷತೆಗಳನ್ನು ಚರ್ಚಿಸಿದ್ದಾಳೆ. ಇಲ್ಲಿ ಹೊನ್ನಮ್ಮ ಪುರುಷನಲ್ಲಿ ಸಂಘರ್ಷಕ್ಕಿಳಿದು ಕಂಟಕ ತಂದುಕೊಳ್ಳುವುದಕ್ಕಿಂತ ಅವನಿಗೊಪ್ಪಿಗೆಯಾಗಿ ನಡೆದುಕೊಂಡು ಅಲ್ಪಸುಖವನ್ನಾದರೂ ಪಡೆಯುವ ಧೋರಣೆ ಅವಳ ಅಸಹಾಯಕತೆಯನ್ನು ತಿಳಿಸುತ್ತದೆ. ಒಂದು ಆದರ್ಶ ಕುಟುಂಬದ ವ್ಯಾಪ್ತಿಯಲ್ಲಿ, ಹೆಣ್ಣಿನ ಬಾಲ್ಯದಿಂದ ಮುಪ್ಪಿನವರೆಗೂ ಮಹಿಳೆ ಹೇಗಿರಬೇಕೆಂಬ ವಿವರಗಳನ್ನು ನೀಡುವ ಪಾತಿವ್ರತ್ಯಧರ್ಮದ ಕೈಗನ್ನಡಿ ಹದಿಬದೆಯ ಧರ್ಮ. ಗಂಡು ತಪ್ಪಿ ನಡೆದಾಗಲೂ ಹೆಣ್ಣೊಬ್ಬಳೇ ಸಂಸಾರದ ಸುಭದ್ರತೆಗಾಗಿ ತ್ಯಾಗ ಮಾಡಬೇಕು. ಕಷ್ಟ ಸಹಿಷ್ಣವಾಗಬೇಕು. ಸಹನಾಮೂರ್ತಿಯಾಗಬೇಕು. ಈ ಬಗೆಯ ನಿಲುವುಗಳನ್ನು ಹೆಣ್ಣಿನ ಅನಿವಾರ್ಯ ಬದುಕಿನ ಅಗತ್ಯಗಳೆಂಬಂತೆ ಹೊನ್ನಮ್ಮ ವಿವರಿಸುತ್ತಾಳೆ. ಇಂದಿಗೂ ನಮ್ಮ ಸಾಂಪ್ರದಾಯಿಕ ಮಹಿಳೆಯರ ಧೋರಣೆ ಇದೇ ಆಗಿದೆ. ಗಂಡನೇ ಪರದೈವ, ಮುತ್ತೈದೆ ಭಾಗ್ಯವೇ ಹೆಣ್ಣಿನ ಬದುಕಿನ ಕೊನೆಯ ಆಶಯವೆಂಬ ತರ್ಕ ಸದಾ ಜಾಗೃತವಾಗಿದೆ.

ಆಧುನಿಕ ಸಮಕಾಲೀನ ಕನ್ನಡ ಸಾಹಿತ್ಯವು ಸ್ತ್ರೀ ಸಂವೇದನೆಯ ಚಿಂತನೆಗೆ ಹೊಸ ಆಯಾಮವನ್ನು ಕೊಡುತ್ತದೆ. ಇದರಲ್ಲಿ ಪುರುಷರಿಂದ ರಚಿತವಾದ ಸ್ತ್ರೀಪರ ದೃಷ್ಟಿಯ ಕಥಾಸಾಹಿತ್ಯ.್ಲ ಭಾರತೀಯ ಕೌಟುಂಬಿಕ ಹಿನ್ನೆಲೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ನಂಬಿದ ಲೇಖಕ ಮಹಿಳಾ ಪಾತ್ರಗಳನ್ನು ಶೋಷಣೆಯ ಸಹಿಷ್ಣು ಪಾತ್ರಗಳಾಗಿಯೇ ಚಿತ್ರಿಸಿದ್ದಾರೆ. ಆದರೂ ಅದನ್ನು ಮೀರಿದ ಮಾನವೀಯತೆಯ ಸೂಕ್ಷ್ಮಗಳನ್ನು ಕೆದಕಿ ನೋಡುವ ಪ್ರಯತ್ನ ಮಹಿಳಾ ಸಂವೇದನೆಯನ್ನು ಧ್ವನಿಸುತ್ತದೆ. ಇಂದಿರಾ, ಇಂದಿರಾಬಾಯಿ, ಸರಸಮ್ಮನ ಸಮಾಧಿ, ಮೂಕಜ್ಜಿಯ ಕನಸುಗಳು, ಮೈಮನಗಳಸುಳಿಯಲ್ಲಿ, ಮರಳಿಮಣ್ಣಿಗೆ ಮೊದಲಾದ ಬೇಂದ್ರೆ ಕಾದಂಬರಿಗಳು, ಕುವೆಂಪು ಅವರ ಕಥಾಸಾಹಿತ್ಯಗಳಲ್ಲಿ ಮಹಿಳಾ ಮನಸ್ಸಿನ ತಳಮಳಗಳು ದಟ್ಟವಾಗಿ ಬೆಳಕಿಗೆ ಬಂದಿವೆ. ನಂತರದ  ಹಳೆಯ ತಲೆಮಾರಿನ ಕೆಲವು ಬರಹಗಾರ್ತಿಯರು ರಚಿಸಿದ ಸಾಹಿತ್ಯದಲ್ಲಿ ಇದಕ್ಕಿಂತ ಹೆಚ್ಚಿನ ಧೋರಣೆಯ ನೆಲೆಗಳಿಲ್ಲ. ಆದರೆ ಮಹಿಳೆಯರು ಬರೆದ ಕಾರಣ ಮಹಿಳಾ ಪ್ರಜ್ಞೆ ಸ್ವಲ್ಪ ಹೆಚ್ಚಿದೆ.

ಬಂಡಾಯ, ದಲಿತ ಚಳುವಳಿಗಳು, ಬಂದ ನಂತರ ಆ ಸಾಹಿತ್ಯದ ಪ್ರೇರಣೆಯಿಂದ ಮಹಿಳಾ ಸಾಹಿತ್ಯದಲ್ಲಿ ಶೋಷಣೆಯ ವಿರುದ್ಧದ ಹೊಸ ಧ್ವನಿ, ಕಾವ್ಯಗಳ ಮೂಲಕ ಹೆಚ್ಚು ಪರಿಣಾಮಕಾರಿಯಾಯಿತು. ಅಂತರರಾಷ್ಟ್ರೀಯ ಮಹಿಳಾಸಂಘ ಸಂಸ್ಥೆಗಳ, ಸಾಹಿತ್ಯಗಳ ಪ್ರೇರಣೆಯಿಂದ ವಿದ್ಯಾವಂತ ಹೊಸ ತಲೆಮಾರಿನ ಸುಶಿಕ್ಷಿತರು ಪ್ರೇರಣೆಗೊಂಡು

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

ಸ್ತ್ರೀವಾದವನ್ನು ಮತ್ತು ಸ್ತ್ರೀ ಸಂವೇದನೆಯನ್ನು ಹೊಸದೆಂಬ ರೀತಿಯಲ್ಲಿ ಪ್ರತಿಪಾದಿಸತೊಡಗಿದರು. ಭಾರತೀಯ ಮತ್ತು ಕನ್ನಡ ಸಾಹಿತ್ಯದಲ್ಲಿನ ಮಹಿಳೆಯರ ಪಾತ್ರಗಳನ್ನು ಹೊಸ ರೀತಿಯಲ್ಲಿ ಅಧ್ಯಯನ ಮಾಡುವ ಧೋರಣೆಯನ್ನು ಬೆಳೆಸಿಕೊಂಡರು. ಸೀತೆ, ದ್ರೌಪದಿ, ಕುಂತಿ, ಅಹಲ್ಯೆ, ತಾರಾ, ಊರ್ಮಿಳ ಮೊದಲಾದ ಪಾತ್ರಗಳು ಆಧುನಿಕವಾಗಿ ಚರ್ಚೆಗೆ ಬಂದವು. ಡಾ.ವಿಜಯಾ, ನೇಮಿಚಂದ್ರ, ಬಿ.ಟಿ.ಲಲಿತಾನಾಯ್ಕ, ಬಿ.ಎನ್, ಸುಮಿತ್ರಾಬಾಯಿ, ಡಾ.ಎಸ್.ವಿ.ಪ್ರಭಾವತಿ, ಹೇಮಾಪಟ್ಟಣಶೆಟ್ಟಿ, ಡಾ.ವಿಜಯಾದಬ್ಬೆ, ಎಚ್.ಎಸ್.ಶ್ರೀಮತಿ ಎಚ್.ಜೆ.ಸರಸವತಿ, ಡಾ.ಮಲ್ಲಿಕಾಘಂಟಿ, ಡಾ.ಸರೋಜಿನಿ ಶಿಂತ್ರಿ, ಡಾ.ವಿಜಯಶ್ರಿ ಸಬರದ, ಲೇಖಕಿ. ಕೆ.ನೀಲಾ. ಮೊದಲಾದವರು ಆಧುನಿಕ ಸ್ತ್ರೀವಾದದ, ಸ್ತ್ರೀ ಸಂವೇದನೆಯ ರೂವಾರಿಗಳಾಗಿರುವುದನ್ನು ಕಾಣಬಹುದು. ತೇಜಸ್ವಿಯವರು ಬರೆದ 'ಕಿರುಗೂರಿನ ಗಯ್ಯಾಳಿ'ಗಳು ಮೊದಲಾದ ಕಥಾಸಾಹಿತ್ಯವನ್ನು ಸ್ತ್ರೀವಾದ ಮತ್ತು ಸ್ತ್ರೀಸಂವೇದನೆಗೆ ಉದಾಹರಣೆಯಾಗಿ ಚರ್ಚಿಸಿದರು. ಗಯ್ಯಾಳಿತನ ಸ್ತ್ರೀಸ್ವಾತಂತ್ರ್ಯ, ಸಮಾನತೆಯ ಸಂಕೇತವೆಂದು ಚಿಂತಿಸಿದರು.

"ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತು ಏನಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹದೇ ಪ್ರತಿಕ್ರಿಯೆಯನ್ನು ಬಯಸುವಂತಹದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದೂ ಸ್ತ್ರೀವಾದವಾಗಿದೆ." " ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳೊಡನೆ ಹೋರಾಟದ ಗೊತ್ತು ಗುರಿಗಳ ಸ್ವರೂಪವನ್ನು ವಿವರಿಸುವುದೇ ಸ್ತ್ರೀವಾದವಾಗಿದೆ ಇದರ ಪಧಾನ ಆಶಯ ಮಹಿಳೆಯ ಬಿಡುಗಡೆ, ಅವಳ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ಸೂಕ್ತ ಆವರಣ ನಿರ್ಮಾಣ ಮಾಡುವುದು." ಸ್ತ್ರೀವಾದ ಪದವು ಇಂಗ್ಲೀಷಿನ ಫೆಮಿನಿಸಂ(Feminism) ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯ ಕಾರಣ, ಯೂರೋಪಿನಲ್ಲಿ ಆದ ಆರ್ಥಿಕ ಪ್ರಗತಿ, ಅದರ ಜೊತೆಯಲ್ಲಿಯೇ ಮಹಿಳಾ ಶೋಷಣೆಯ ಕೂಗು ಗಟ್ಟಿ ಧ್ವನಿಯಾಗಿ ಕೇಳಿಬಂತು. ಮಹಿಳೆ ಯಾವ ದೇಶದಲ್ಲಿಯೇ ಆಗಲಿ ಶೋಷಿತಳೇ, ಅವಳ ಕಥೆ ನೋವಿನ ತಳಮಳ. ಇದರ ನಿವಾರಣೆಗಾಗಿ ಮಹಿಳೆಯರೇ ಸಂಘಟಿತಗೊಂಡ ಸಂಘಟನೆ ಮಹಿಳಾ ಚಳುವಳಿ. ಇದನ್ನು ಗಟ್ಟಿಗೊಳಿಸುವಂತಹ ಗ್ರಂಥಗಳೆಂದರೆ, ಬೆಟಿ ಫ್ರಾಯಡನ್‌ಳ ' ದ್ಧಿ ಫೆಮಿನೈನ್ ಮಿಸ್ಟಿಕ್' ಮೇರಿ ವೂಲಸ್ಟನ್ ಕ್ರಾಫ್ಟ್‌ಳ 'ದಿ ವಿಂಡಿಕೇಶನ್ ಆಫ್ ದಿ ರೈಟ್ಸ್ ಆಫ್ ವಿಮೆನ್', ವರ್ಜೀನಿಯಾ ವುಲ್ಫ್‌ಳ ' ಎ ರೋಮ್ ಆಫ್ ಒನ್ ಓನ್ಸ್', ಮೇರಿ ಫರ್ಗುಸನ್ನಳ 'ಇಮೇಜಸ್ ಆಫ್ ವಿಮೆನ್ ಇನ್ ಲಿಟರೇಚರ್', ಕೇಟ್ ಮಿಲೇಟ್‌ಳ 'ಸೆಕ್ಸ್ಯುಯೆಲ್ ಪಾಲಿಟಿಕ್ಸ್', ಪ್ಯಾಟ್ರಿಸಿಯಾ ಸ್ಪಾಕ್ಸಳ 'ದ ಫೇಮೇಲ್ ಇಮ್ಯಾಜಿನೇಷನ್', ಎಲೆನಾ ಶೋವಾಲ್ಟರ್‌ಳ ಫೆಮಿನಿಸ್ಟ್ ಕ್ರಿಟಿಸಿಸಂ ಇನ್ ದ ವೈಲ್ಡೆರ್ನೆಸ್ ಲೇಖನ, ಟುವರ್ಡ್ಸ್ ಎ ಫೆಮಿನಿಸ್ಟ್ ಪೊಯೆಟಿಕ್ಸ್ ಲೇಖನ, ಮತ್ತು ಸೀಮೋನ್ ದ ಬೋವರ ಚಿಂತೆಗಳು, ಹೀಗೆ ಯುರೋಪಿಯನ್ ಮಹಿಳಾ ಚಿಂತನೆಗಳಿಂದ ಪ್ರೇರಿತವಾದ ಕನ್ನಡ ಸ್ತ್ರೀವಾದ ನೇರವಾಗಿ ವಿದೇಶಿ ಸಂಸ್ಕೃತಿ ಮಾನದಂಡಗಳನ್ನು ಕನ್ನಡ ನೆಲದಲ್ಲಿ ಪ್ರಯೋಗಿಸಿತು. ಸ್ತ್ರೀವಾದದ ರೂಪುರೇಷೆಗೆ ಬುನಾದಿ ಹಾಕಲು ಈ ಮೂಲಕ ಸಾಧ್ಯವಾಯಿತು.

ಆದರೆ ಈ ಮಧ್ಯೆ ದ್ವಂದ್ವ ನಿಲುವುಗಳು ಮಹಿಳೆಯರಲ್ಲಿ ಏರ್ಪಟ್ಟು, ಸರಿಯಾದ ಸಂಘಟನೆಯನ್ನು ಕಟ್ಟುವಲ್ಲಿ ತೊಡಕುಗಳು ಎದುರಾಗುತ್ತಿದೆ. ಮಹಿಳೆಯರಲ್ಲಿ ವಿದೇಶಿ ಚಿಂತನೆಗಳ ನೇರ ಅನುಕರಣೆ ಒಂದು ಕಡೆಯಾದರೆ, ಸ್ವದೇಶಿ ಸಂಸ್ಕೃತಿಗೆ ಅನುಗುಣವಾಗಿ ಸ್ತ್ರೀವಾದವನ್ನು ಕಟ್ಟುವ ಬಗೆಯ ಚಿಂತನೆ ಮತ್ತೊಂದು, ಇನ್ನು ಹಿಂದುಳಿದ ಮತ್ತು ದಲಿತ ಮಹಿಳೆಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳವ, ಅವರಿಗೂ ನಾಯಕತ್ವವನ್ನು ನಿರ್ವಹಿಸಲು ಅವಕಾಶವನ್ನು ಕೊಡಲು ಇರುವ ಜಾತಿ ತೊಡುಕುಗಳು, ವಿದ್ಯಾವಂತ, ಅರೆವಿದ್ಯಾವಂತ, ಅನಕ್ಷರ ಮಹಿಳೆಯರಲ್ಲಿನ ಸಂಘಟನೆಯ ಕೊರತೆ ಮತ್ತು ಭಿನ್ನತೆಯ

ISSN PRINT 2319 1775 Online 2320 7876
*Research Paper* © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

ನಿಲುವುಗಳು ಸಮರ್ಥ ಸ್ತ್ರೀವಾದವನ್ನು ಕಟ್ಟುವಲ್ಲಿ ವಿಫಲವಾಗುತ್ತಿದೆ. ಬಂಡಾಯ ಚಳುವಳಿ, ದಲಿತ ಚಳುವಳಿಗಳು ಒಟ್ಟಾಗಿ ಸಾಹಿತ್ಯ ಸಂಘಟನೆಯನ್ನು ನಿರ್ಮಿಸಿದಂತೆ, ಮಹಿಳೆಯರಲ್ಲಿ ಹೋರಾಟ ಮತ್ತು ಸಾಹಿತ್ಯ ಒಂದಾಗುತ್ತಿಲ್ಲ. ಕಾರ್ಮಿಕ ಮಹಿಳಾ ಸಂಘಗಳ ಜೊತೆ ಸುಶಿಕ್ಷಿತ ಸ್ತ್ರೀವಾದ ಬೆರೆಯುತ್ತಿಲ್ಲ. ಸ್ತ್ರೀ ಸಮಸ್ಯೆಗಳು ನಾಲ್ಕುಗೋಡೆಗಳ ಮಧ್ಯೆ ಚರ್ಚೆ ಬಂದರೂ, ಸ್ತ್ರೀವಾದದ ಗಟ್ಟಿತನ ಬೆಳೆಯುತ್ತಿಲ್ಲ ಎನ್ನುವುದು ಕಠೋರವಾದರೂ ಸತ್ಯ.

ಭಾರತದಲ್ಲಿ ಅಥವಾ ವಿಶ್ವದಲ್ಲಿ ಮಹಿಳೆ ಮತ್ತು ಪುರುಷರು ಸರಾಸರಿ ಸುಮಾರು ಸಮಪ್ರಮಾಣದಲ್ಲಿದ್ದಾರೆ. ಅವರ ದೈಹಿಕ ಶ್ರಮದ ಸ್ವರೂಪ, ದುಡಿಮೆಯನ್ನು ಅಳೆಯುವ ಮಾನದಂಡಗಳು ಸಮನಾಗಿವೆ. ಆದರೂ ಮಹಿಳೆಯನ್ನು ಒಬ್ಬ ವ್ಯಕ್ತಿಯಾಗಿ ನೋಡುವುದಕ್ಕಿಂತ, ಅವಳ ರೂಪ, ಬಟ್ಟೆಬರೆ ಅಂದ ಚಂದದ ಸ್ವರೂಪಗಳನ್ನೇ ಗುರುತಿಸಿ, ಪುರುಷನ ಸುಖದ, ಭೋಗದ ವಸ್ತುವಿನಂತೆ ನೋಡಲಾಗುತ್ತಿದೆ. ಸ್ವಾತಂತ್ರ್ಯ, ಸಮಾನತೆ ಸಹೋದರಿತನಗಳನ್ನು ಮಹಿಳೆಗೆ ಕೊಟ್ಟು ಗೌರವಿಸುವ ವ್ಯವಸ್ಥೆ ಇನ್ನೂ ಬಂದಿಲ್ಲ. ಮಹಿಳಾ ಮೀಸಲಾತಿ ಗಂಭೀರವಾಗಿ ಚರ್ಚೆಯಾಗುತ್ತಿಲ್ಲ. ಅದಕ್ಕಾಗಿಯೇ 'ಸ್ತ್ರೀಸಂವೇದನೆ ಮತ್ತು ಸಂಘರ್ಷ' ವಿಷಯಗಳು ಪ್ರಸ್ತುತವಾಗುತ್ತಿದೆ.

ಮಹಿಳೆ ತಡವಾಗಿಯಾದರೂ ತನ್ನ ಇತಿಹಾಸವನ್ನು ಹುಡುಕುತ್ತಾ ಎಚ್ಚೆತ್ತುಕೊಳ್ಳುತ್ತಿದ್ದಾಳೆ. ತನಗಾಗಿರುವ ಘೋರ ಅನ್ಯಾಯದ ಅರಿವು ಮಹಿಳೆಗುಂಟಾಗಿದೆ. ಮಹಿಳಾ ಜಾಗೃತಿ ಮಹಿಳೆಯ ಬದುಕಿಗೆ ಹೊಸ ಆಯಾಮವನ್ನು ತಂದುಕೊಡುವ ಪ್ರಯತ್ನದಲ್ಲಿದೆ. ಮಹಿಳೆ ಗ್ರಹಿಸಬೇಕಾಗಿರುವುದು ತನ್ನ ಇತಿಹಾಸ, ತನ್ನನ್ನು ಕೀರ್ತಿಸುತ್ತ ಬಂದಿರುವ ಪುರುಷ ಪ್ರಧಾನ ಮೌಲ್ಯಗಳ ಒಳಮರ್ಮಗಳ ಜೊತೆ ಅನುಸಂಧಾನ. ಇದರ ಆಶಯ, ಮಹಿಳಾ ಶೋಷಣೆಯ ಬಿಡುಗಡೆ. ಮಹಿಳೆಯು ತನ್ನ ವ್ಯಕ್ತಿತ್ವ ವಿಕಾಸವನ್ನು ಬೆಳೆಸುತ್ತಾ, ಪುರುಷನೊಂದಿಗಿನ ವಿಶ್ವಾಸ, ಸಮಾನತೆಗಳ ಆಧಾರದಲ್ಲಿ ಕೌಟುಂಬಿಕ ಬದುಕನ್ನು ಬಿಗಿಗೊಳಿಸುವ ನಿರ್ಮಾಣ ಕೌಶಲ್ಯವನ್ನು ಮಾಡಬೇಕಾಗಿದೆ. ಸ್ತ್ರೀವಾದದಲ್ಲಿ ಸ್ತ್ರೀಯರ ಪ್ರಗತಿ, ಸಮಾನತೆ, ಸ್ವಾತಂತ್ರ್ಯಗಳಿಗೆ ಪ್ರಾತಿನಿಧ್ಯ ನೀಡುವುದು ಮುಖ್ಯ. ಪ್ರಜ್ಞಾವಂತ ಪುರುಷರ ಜೊತೆ ಮಹಿಳಾ ವಿಷಯಗಳನ್ನು, ಸಮಸ್ಯೆಗಳನ್ನು ಚರ್ಚಿಸಿ, ಅವರಿಂದಲೇ ಪರಿಹಾರ ಸೂತ್ರಗಳನ್ನೂ ಸಾಧ್ಯವಾದರೆ ಪಡೆಯುವುದು ಸ್ತ್ರೀವಾದದ ಉದ್ದೇಶ.

'ಸ್ತ್ರೀಸಂವೇದನೆ' ಎಂದರೇನು? ಮಹಿಳಾಜ್ಞಾನ, ತಿಳುವಳಿಕೆ, ಅನುಭವಜ್ಞಾನ, ಒಟ್ಟಾರೆ ಅದೊಂದು ಮಹಿಳಾ ಪ್ರಜ್ಞೆ, ಅವರ ಅರಿವು, ಅವರ ಕುರಿತು ಅವರೇ ಕಂಡುಕೊಂಡ ಸತ್ಯ. ಸಮಾಜದ ಬಗ್ಗೆ ಅವರ ತಿಳುವಳಿಕೆ. ಅವರ ದೌರ್ಬಲ್ಯ–ಶೋಷಣೆಗಳ ಕುರಿತ ವಿವೇಕ. ಅವರ ಪ್ರಗತಿಯ ಬಗ್ಗೆ ಜಾಗೃತಿ. ಅವರ ಮನಸಿನ ತಳಮಳ. ಅವರ ಅಂತರಾಳದ ಸ್ಪರ್ಶಧ್ವನಿ. ಪಿಸುಮಾತುಗಳ ಕಲರವ. ಅವರ ನಿದ್ದೆಕೆಡಿಸಿದ ರೋಧನಗಳೆಲ್ಲವೂ ಸಂವೇದನಾ ರೂಪವಾಗಿ ಜಿನುಗುತ್ತಿರುವ ರಸ ಬುಗ್ಗೆಗಳಾಗಿವೆ. ಈ ಕಾರಣಕ್ಕಾಗಿ ಸ್ತ್ರೀವಾದವನ್ನು ಮಂಡಿಸಲಾಗುತ್ತಿದೆ. ಸ್ತ್ರೀ ಸಂಘರ್ಷವನ್ನು ಮಾಡಲು ಸಂಘಟನೆ ಅನಿವಾರ್ಯವಾಗಿದೆಂದು ಚರ್ಚಿಸಲಾಗುತ್ತಿದೆ. ಮಾರ್ಕ್ಸವಾದ, ಸಮತಾವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ, ಗಾಂದೀವಾದಗಳ ರೂಪದಲ್ಲಿ ಸ್ತ್ರೀವಾದವನ್ನು ರೂಪಿಸಲು ಹೆಣಗಾಡುತ್ತಿದ್ದಾರೆ. ಆ ಎಲ್ಲಾ ವಾದಗಳ ಸತ್ವವನ್ನು ಜೀರ್ಣಿಸಿಕೊಂಡು ಹೊಸ ಮಹಿಳಾ ವಾದವನ್ನು ಕಟ್ಟಲು ಪರಿಶ್ರಮ ಪಡಲಾಗುತ್ತಿದೆ.

ಇಪ್ಪತ್ತೊಂದನೆಯ ಶತಮಾನದ ಮಾರುಕಟ್ಟೆ ಬಿಕರಿಯುಗದಲ್ಲಿ ವಾದಗಳನ್ನೆಲ್ಲಾ ಮಣ್ಣು ಮಾಡುತ್ತಿರುವ ನಾವು, ಮಹಿಳಾವಾದವನ್ನು ರೂಪಿಸುವುದಾದರೂ ಹೇಗೆ? ಪಾಶ್ಚಿಮಾತ್ಯ ಸ್ತ್ರೀವಾದ ಇದ್ದೇ ಇದೆ. ಅದರ ಅನುಕರಣೆ ನಮ್ಮ ನೆಲದಲ್ಲಿ ಎಷ್ಟರಮಟ್ಟಿಗೆ ಸಾಧ್ಯ. ನಮ್ಮ ಮಹಿಳೆ ಮೊದಲೇ ಭಾವಜೀವಿ. ಸಂಪ್ರದಾಯಸ್ಥೆ, ಪುರುಷ ಪರ ಮೌಲ್ಯಗಳನ್ನು ಪುರುಷನಿಗಿಂತಲೂ ಹೆಚ್ಚು ಪಾಲಿಸುವ, ಭ್ರಮಾಧಾರಣಿ. ತನಗೆ ತನ್ನ ಮಗಳಿಗಿಂತಲೂ ಮಗನೇ ಹೆಚ್ಚು. ಗಂಡನನ್ನು ಬೈದರೂ ಅವನ ಸಾವಿನಿಂದ ಮುತ್ತೈದೆಭಾಗ್ಯ ಹೋಗುತ್ತದೆಂದು ಹಂಬಲಿಸುವ ಪತಿವ್ರತೆ. ಸಮಾಜದ ಪುರುಷರ ಬಗ್ಗೆ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 10, Iss 03, 2021

ರೋಷವುಕ್ಕಿದರೂ, ಮನೆಪುರುಷನ ಬಗ್ಗೆ ಅಭಿಮಾನ. ಮನೆಯ ಮಗ ಕಂದ. ಪುರುಷ ಪುರುಷನೇ ಎಂಬ ವಾಸ್ತವ ಗೊತ್ತಿದ್ದರೂ, ಪುರುಷಮೂಲದ ಮಹಿಳಾ ಶೋಷಕ ನೆಲೆಗಳನ್ನು ನಿವಾರಿಸಲು ಆಗುತ್ತಿಲ್ಲ. ಯಾವಾಗಲೋ ಪುರುಷ ಹೆಣೆದ ಧಾರ್ಮಿಕ ಸೂತ್ರಗಳನ್ನು ಹರಿಯಲು ಇನ್ನೂ ಆಗುತ್ತಿಲ್ಲಾ.

ಮಹಿಳಾ ಪ್ರಜ್ಞೆಯನ್ನು ಜಾಗೃತಿಗೊಳಿಸುವ ಆಶಯಗಳನ್ನು, ತನ್ನ ಪರವಾದ ವಾದದಲ್ಲಿ ಪ್ರತಿಪಾದಿಸಿ, ಮಹಿಳೆಗೆ ಶಿಕ್ಷಣ, ಅರಿವು, ಅವಳ ರಕ್ಷಣೆಯ ತಂತ್ರಗಳನ್ನು ರೂಪಿಸುವ, ಜಾಣ್ಮೆಯ ಕಾರ್ಯ ಕ್ಷಮತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೆಲವರು ಪ್ರಾಮಾಣಿಕವಾಗಿ ಮಹಳೆಯ ಕಣ್ಣೀರಿನ ಕಥೆಗೆ ಮರುಗಿ ಜಾಗೃತಿ ವಿಚಾರಗಳನ್ನು ತಿಳಿಸಿದರೆ, ಮಧ್ಯಮ ವರ್ಗದ ಸುಶಿಕ್ಷಿತ ಮಹಿಳೆ ಭಾವೋದ್ರೇಕವಾಗಿ ಮಾತನಾಡುತ್ತಾಳೆ. ಅದನ್ನು ಕೇಳುವ ತಾಳ್ಮೆ ಯಾರಿಗೂ ಇಲ್ಲಾ. ಮಹಿಳಾ ಪರಶೋಷಣೆಯ ಬಗ್ಗೆ ಸ್ಪಷ್ಟ ಅರಿವಿದ್ದರೂ, ಅದಕ್ಕೆ ಪರಿಹಾರದ ವಾದ–ಚಿಂತನೆಗಳನ್ನು ರೂಪಿಸಲು, ಆ ಮೂಲಕ ವ್ಯವಸ್ಥೆಯನ್ನು ಸರಿಪಡಿಸಲು ಕಂಡುಕೊಂಡ ದಾರಿ ದುರ್ಬಲವಾಗುತ್ತಿದೆ. ಭಾರತದಲ್ಲಿನ ಸಾಮಾನ್ಯ ಒಂದು ಸಣ್ಣ ವಿಷಯ, ಮಹಿಳಾ ಶೌಚಾಲಯಗಳಲ್ಲಿ ಪುರುಷರಂತೆ ತಮಗೂ ಉಚಿತ ಪ್ರವೇಶವನ್ನು ಕಲ್ಪಿಸುವುದು ಸಾಧ್ಯವಾಗುತ್ತಿಲ್ಲ. ಅದಕ್ಕೆ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಸಂಘಟನಾ ಮನೋಭಾವವೇ ಮಹಿಳೆಯರಲ್ಲಿ ಇಲ್ಲದೆ, ಹಣಕೊಟ್ಟು ವ್ಯವಸ್ಥೆಗೆ ಹೊಂದಿಕೊಳ್ಳುವ ಮಹಿಳೆ, ಮಹಿಳಾ ಸಬಲೀಕರಣದ ಬಗ್ಗೆ ಜಾಗೃತಿಗೊಳ್ಳುವುದಾದರೂ ಹೇಗೆ? ಸಭೆಯಲ್ಲಿ ಭಾಷಣದ ರೂಪದಲ್ಲಿ ಮಹಿಳೆ ಸಂಕಷ್ಟಗಳನ್ನು ಹೇಳಿಕೊಂಡು, ನೋವನ್ನು ವ್ಯಕ್ತಪಡಿಸಲು ಸಾಧ್ಯವಾಗುತ್ತದಾದರೆ, ಕೃತಿಯಲ್ಲಿ ಅದರ ಬಗ್ಗೆ ಪ್ರತಿಭಟನೆ ಇಲ್ಲದೆ ಹೋದರೆ, ಶೋಷಣೆ ಅನಿವಾರ್ಯವಾಗಿ ಬಿಡುತ್ತದೆ. ಈ ಜಾಗೃತಿಯೂ ನಮಗೆ ಬಹಳ ಮುಖ್ಯ.

ಕೊನೆದಾಗಿ ಎಲ್ಲಾ ವರ್ಗದ ಮಹಿಳೆಯರಲ್ಲಿ, ಅರಿವಿನ ಜಾಗೃತಿ ಮೂಡಿಸುವ ಕಾರ್ಯ, ಸಂಘಟನಾತ್ಮಕ ಹೋರಾಟದ ನೀತಿಸಂಹಿತೆಗಳನ್ನೂ ಸ್ತ್ರೀವಾದ ಒಳಗೊಳ್ಳಬೇಕಾಗಿದೆ. ಅದು ಇನ್ನು ಪರಿಪಕ್ವವಾಗದ ಮಾತು. ಸುಶಿಕ್ಷಿತರೂ ಸಹ ಅದೇ ಹಳೆದೈವ, ಭಕ್ತಿ, ಸಂಪ್ರದಾಯ, ಆಚರಣೆಗಳ ಕಬ್ಬಿಣ ಕೋಳಗಳನ್ನು ಕಾಲಿಗೆ ಧರಿಸಿ, ಮಹಿಳಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಾರೆ. ಆ ಭರದಲ್ಲಿ ಪುರುಷ ದ್ವೇಷಿಯೆಂಬ ನಿಂದನೆಗೆ ಗುರಿಯಾಗಿ, ಸ್ತ್ರೀವಾದವೆಂದರೆ, 'ಸ್ತ್ರೀ ಲೈಂಗಿಕ ಸ್ವಾತಂತ್ರ್ಯವನ್ನು ಕೋರುವ, ಭಂಡತನದ ತರ್ಕವೆಂಬ' ಅವಕಾಶವಾದಿಗಳ ಆರೋಪಕ್ಕೆ ಗುರಿಯಾಗಿ, ಮಹಿಳೆಯರ ವಿಚಾರಗಳು ದಾರಿತಪ್ಪುತ್ತಿವೆ. ಇದರ ಪ್ರಚಾರ ಮುಗ್ಧ ಮಹಿಳೆಯರ ಕಿವಿಗೆ ಬಿದ್ದು ಮಹಿಳೆಯರೇ ಬೇಸರ ಪಡುವ ದುರಂತ ನಡೆಯುತ್ತಿದೆ. ಇಂತಹ ನಿಂದನೆಗೂ ಗುರಿಯಾಗಿ ಮಹಿಳಾ ವಾದ ಹಳ್ಳದಲ್ಲಿ ಬೀಳುವ ಸಂಭವ ನಡೆಯುತ್ತಿದೆ. ಸ್ತ್ರೀವಿರೋಧಿ ಕೆಲ ಅವಕಾಶವಾದಿಗಳಿಗೆ ಇದೇ ಅಸ್ತ್ರವಾಗಿ ಮಹಿಳಾ ವಿಮೋಚನೆಗೆ ಮುಳ್ಳಾಗುತ್ತಿರುವುದು ಕಠಿಣವಾದರೂ ಸತ್ಯ. ಅದರಿಂದ ಸಮಗ್ರ ಮಹಿಳಾ ಶಿಕ್ಷಣ, ಸಮಗ್ರ ಮಹಿಳಾ ಜಾಗೃತಿ, ಸಮಗ್ರ ಮಹಿಳಾ ಸಂಘಟನೆ, ಸ್ತ್ರೀವಾದ ಮತ್ತು ಸ್ತ್ರೀಸಂವೇದನೆಯಲ್ಲೆ ಸ್ಪಷ್ಟತೆ, ಇವು ಅನಿವಾರ್ಯವಾಗಬೇಕಲ್ಲವೇ? ಆಗ ಮಾತ್ರ ಸ್ತ್ರೀವಾದಕ್ಕೆ ಒಂದು ಗಟ್ಟಿ ಬುನಾದಿ ಒದಗಿ ಬರುತ್ತದೆ.

**ಪರಾಮರ್ಶನ ಗ್ರಂಥಗಳು :**

1. 'ಕನ್ನಡದಲ್ಲಿ ಸ್ತ್ರೀಯಾತ್ಮಕತೆಯ ಅಭಿವ್ಯಕ್ತಿ ಮತ್ತು ಸ್ತ್ರೀವಾದಿ ಚಳವಳಿ'ಕನ್ನಡ ಸಾಹಿತ್ಯ ಸಂದರ್ಭ–ಡಾ.ವಿಜಯಾದಬ್ಬೆ–ಸಾಹಿತ್ಯ ಅಕಾಡೆಮಿ ಪ್ರಕಾಶನ–1990.
2. ಮಹಿಳೆ ಬಿಡುಗಡೆ ಹಾದಿಯಲ್ಲಿ– ಎನ್ ಗಾಯತ್ರಿ– ನವಕರ್ನಾಟಕ ಪ್ರಕಾಶನ–1991.
3. ವಚನಧರ್ಮಸಾರ–ಎಂ.ಆರ್.ಶ್ರೀನಿವಾಸಮೂರ್ತಿ– ಮೈಸೂರು–1968

4. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ–ವಿಚಾರಸಂಕಿರಣಮಾಲೆ– ವಿವಿಧ ಲೇಖಕರು–ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳುರು–ಎರಡನೆ ಮುದ್ರಣ–2006
5. ಆಯ್ದುವಚನಗಳು–ಸಂ.ಡಾ.ನೀಲಾಂಬಿಕಾ ಶೇರಿಕಾರ. ಪ್ರಸಾರಾಂಗ, ಗು.ವಿ.ವಿ.ಗುಲ್ಬರ್ಗ–2010
6. ಆಯ್ದ ಜನಪದ ಕಥಾನಕಗಳು –ಡಾ.ಶಾರದಾದೇವಿ ಎಸ್.ಜಾಧವ–ಪ್ರಸಾರಾಂಗ, ಗು.ವಿ.ವಿ.ಗುಲ್ಬರ್ಗ–2011
7. ವಚನ–ಸ್ವರವಚನಗಳ ಸಂಗ್ರಹ– ಡಾ.ಪಾರ್ವತಿ ಪೂಜಾರ, ಡಾ.ಚಂದ್ರಕಲಾ ಬಿದರಿ–ಪ್ರಸಾರಾಂಗ, ಗು.ವಿ.ವಿ.ಗುಲ್ಬರ್ಗ–2008
8. ಸಾಹಿತ್ಯ ವಿಮರ್ಶೆ– ಸಿ.ಎನ್.ರಾಮಚಂದ್ರನ್–

************

**ಡಾ.ವೈ.ಚಂದ್ರಬಾಬು**
ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ,
ಹೂವಿನಹಡಗಲಿ–583219
ಮೊಬೈಲ್ ನಂ: 9449380356
ಇಮೇಲ್–chandrababu.y3@gmail.com